

📌ಸೂಕ್ಷ್ಮಾಣು ಜೀವಿಗಳಿಗೆ ಸಂಬಂಧಿಸಿದ ಪ್ರಶ್ನೆಗಳು📌

1. ಬರಿಗಣ್ಣಿಗೆ ಕಾಣದ ಜೀವಿಗಳು – "ಸೂಕ್ಷ್ಮಾಣು ಜೀವಿಗಳು"

2. ಸೂಕ್ಷ್ಮಾಣು ಜೀವಿಗಳನ್ನು ನೋಡಲು ಬಳಸುವ ಉಪಕರಣ– "ಸೂಕ್ಷ್ಮದರ್ಶಕ"

3. ಸೂಕ್ಷ್ಮಾಣುಜೀವಿಗಳ ಬಗ್ಗೆ ಅಧ್ಯಯನ ಮಾಡುವ ಜೀವಶಾಸ್ತ್ರದ ಶಾಖೆ – "ಸೂಕ್ಷ್ಮಣುಜೀವಶಾಸ್ತ್ರ (ಮೈಕ್ರೋಬಯೋಲಜಿ)

4. ಸೂಕ್ಷ್ಮಾಣುಜೀವಿಗಳನ್ನು ಅಳೆಯುವ ಜೀವಮಾನ– "ಮೈಕ್ರಾನ್"

5. ಸೂಕ್ಷ್ಮಾಣು ಜೀವಶಾಸ್ತ್ರದ ಪಿತಾಮಹಾ– "ಲೂಯಿಪಾಶ್ಚರ್".

6. ಸೂಕ್ಷ್ಮಾಣು ಜೀವಿಗಳ ಬಗೆಗಳು –

ವೈರಸ್‌ಗಳು, ಬ್ಯಾಕ್ಟೀರಿಯಾ, ಶೀಲಿಂಧ್ರ, ಪ್ರೋಟೋಜೋವಾ(ಏಕಕೋಶಜೀವಿಗಳು), ಮತ್ತು ಶೈವಲಗಳು.

7. ಇವು ಸಜೀವಿ ಮತ್ತು ನಿರ್ಜೀವಿಗಳ ನಡುವಿನ ಕೊಂಡಿಯಾಗಿದ್ದು, ಅತ್ಯಂತ ಚಿಕ್ಕ ಸೂಕ್ಷ್ಮಾಣುಜೀವಿಗಳಾಗಿವೆ– ವೈರಸ್‌ಗಳು

8. ಜೀವಿಗಳ 5 ಸಾಮ್ರಾಜ್ಯಕ್ಕೆ ಸೇರದ ಜೀವಿಗಳು – ವೈರಸ್‌ಗಳು

9. ಒಂದು ವೈರಸ್ ಯಾವುದೇ ಜೀವಿಯ ಕೋಶದ ಸಂಪರ್ಕಕ್ಕೆ ಬಂದಾಗ ವೈರಸ್‌ನ ಇದು ಮಾತ್ರ ಪೋಷಕ ಜೀವಿಯೊಳಗೆ ಪ್ರವೇಶವಾಗುತ್ತದೆ– "ನ್ಯೂಕ್ಲಿಕ್ ಆಮ್ಲ"

10. ವೈರಸ್‌ಗಳು ಯಾವ ಸೂಕ್ಷ್ಮದರ್ಶಕದ ಮೂಲಕ ಮಾತ್ರ ಕಾಣುತ್ತವೆ– ಎಲೆಕ್ಟ್ರಾನ್ ಸೂಕ್ಷ್ಮದರ್ಶಕ

11. ವೈರಸ್‌ಗಳ ಗಾತ್ರ – 0.015 ರಿಂದ 0.2 ಮೈಕ್ರಾನ್.

12. ವೈರಸ್‌ಗಳ ವಿಧಗಳು – ಸಸ್ಯವೈರಸ್, ಪ್ರಾಣಿವೈರಸ್, ಬ್ಯಾಕ್ಟಿರಿಯೋ ಫೇಜ್

13. ‘ಬ್ಯಾಕ್ಟೀರಿಯೋ ಫೇಜ್’ ಎಂದರೆ – ಬ್ಯಾಕ್ಟಿರಿಯಾಗಳಿಗೆ ಸೋಂಕನ್ನು ಉ0ಟುಮಾಡುವ ವೈರಸ್

14. ವೈರಸ್‌ಗಳಿಂದ ಉಂಟಾಗುವ ರೋಗಗಳು – ನೆಗಡಿ, ದಡಾರ, ಸಿಡುಬು, ಪೋಲಿಯೋ, ಇನ್‌ಪ್ಲೂಯೆಂಜಾ, ಏಡ್ಸ್, ಕಾಮಾಲೆ , ಮಂಗನಬಾವು, ಕರೋನಾ ಇತ್ಯಾದಿ.

15. ಬ್ಯಾಕ್ಟೀರಿಯಾಗಳ ಗಾತ್ರ– 0.2 ರಿಂದ1.0 ಮೈಕ್ರಾನ್‌ಗಳು.

16. ಬ್ಯಾಕ್ಟೀರಿಯಾಗಳ ಕೋಶಭೀತ್ತಿ ಇವುಗಳಿಂದ ರಚಿತವಾಗಿದೆ– ಪ್ರೋಟಿನ್ ಮತ್ತು ಕಾರ್ಬೋಹೈಡ್ರೇಟ್

17. ಬ್ಯಾಕ್ಟೀರಿಯಾ ಶಾಸ್ತ್ರದ ಪಿತಾಮಹಾ – ರಾಬರ್ಟ್ ಕೋಚ್

18. ಒಂದು ಬ್ಯಾಕ್ಟೀರಿಯಾ ವಿಭಜಿಸಿ 2 ಮರಿಕೋಶಗಳಾಗಲು ತೆಗೆದುಕೊಳ್ಳುವ ಸಮಯ – 20 ನಿಮಿಷ

19. ಯಾವ ಅಂಶಗಳು ಬ್ಯಾಕ್ಟೀರಿಯಾಗಳ ಬೆಳವಣಿಗೆಗೆ ಅನೂಕೂಲವಾಗಿದೆ– ಉಷ್ಣ ಮತ್ತು ತೇವಾಂಶ